# ವರಗಿರಿಯಿಂದ ತಿಮ್ಮಪ್ಪ ಬಂದ

**(ಕ್ಷೇತ್ರ ಸುಳಾದಿ)**

**(ಅಭಿಶ್ರವಣ ಸುಳಾದಿ)**

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru. Given in blue highlights.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru. There are two versions.
3. **Ref.:** Purandara Dasara Suladigalu – Edited by Shri Pavanje Gururao, Sriman Madhwa Siddantha Granthalaya, Udupi (1927). Given in yellow highlights.
4. **Note:** The wordings given without highlights are almost similar to the wordings given in Ref. 1 & Ref. 2. These wordings are mostly followed by the singer.
5. **Note:** The wordings given in yellow highlights are as per Ref. 3. The wordings given in blue highlights are as per Ref. 1 and Ref. 2 (another version). These two are similar in most part.
6. **Note:** After going through the wordings of all the versions, I feel that the wordings given in Ref. 1 is more correct. However, it is upto the scholars and researchers to decide.

**ರಾಗ: ಕಲ್ಯಾಣಿ**

**ಧೃವ ತಾಳ**

ವರಗಿರಿಯಿಂದ ತಿಮ್ಮೊಪ್ಪ ಬಂದ ಹಸ್ತಿ
ಗಿರಿಯಿಂದ ವರದರಾಜ ಬಂದ ಯದು
ಗಿರಿಯಿಂದ ಶ್ರೀ ನಾರಾಯಣ ಬಂದ ಕಾವೇರಿ
ಶ್ರೀ ರಂಗನಾಥ ಬಂದ
ಶ್ರೀಮುಷ್ಣದಿಂದ ಶ್ವೇತ ವರಹ ಬಂದ
ಪಂಡರಪುರದಿಂದ ಎನ್ನ ಮನಿಗೆ ಮನ್ನಿಸಿ
ಪುರಂದರ ವಿಠ್ಠಲರಾಯ ಬಂದ ॥ ೧ ॥

**ಮಟ್ಟ ತಾಳ**

ಬದರಿಕಾಶ್ರಮದಿಂದ ಬಾದರಾಯಣ ಬಂದ
ಕಿಂಪುರುಷ ಖಂಡದಿಂದ ಹನುಮನೊಡೆಯಾ ರಾಮ
ಚಂದ್ರ ಬಂದ ಕ್ಷೀರ ವಾರುಧಿಯಿಂದ ಶ್ರೀಮಂತ ಪು -

ರಂದರ ವಿಠ್ಠಲರಾಯ ಬಂದ     ॥ ೨ ॥

**ತ್ರಿವಿಡಿ ತಾಳ**

ಶ್ರೀಮದನಂತಶಯನದಿಂದ
ಶ್ರೀಮದನಂತಶಯನ ಬಂದ
ಶ್ರೀ ಮಧ್ವಾಚಾರ್ಯರ ಮನೆ ದೈವ
ಶ್ರೀ ಮದ್ದ್ವಾರಾವತಿಯಿಂದ ಬಂದ
ಶ್ರೀಮದುಡುಪಿನ ಕೃಷ್ಣರೇಯ ಬಂದ
ಶ್ರೀಪತಿ ಪುರಂದರ ವಿಠ್ಠಲರಾಯ ಬಂದ     ॥ ೩ ॥

**ಅಟ್ಟ ತಾಳ**

ಪ್ರಯಾಗ ಮಾಧವ ಕಾ -
ಶೀಯಾದಿ ಕೇಶವ ಕ್ಲೇಶನಾಶನ ಬಂದ
ಗಯಾ ಗದಾಧರ ದಾಸರಿಗೊಲಿದು
ಪುರಂದರ ವಿಠ್ಠಲರಾಯ ಬಂದ     ॥ ೪ ॥

**ಆದಿ ತಾಳ**

ಅತಳ ವಿತಳದಿಂದ ಸುತಳ ತಳಾತಳ ರ-
ಸಾತಳ ಮಹಾತಳ ಪಾತಾಳದಿಂದ
ಭೂತಳ ನಭಸ್ಥಳದಿಂದಾನು ವಿಜನ ಮಹರ್ಲೋಕ
ಸತ್ಯಲೋಕದಿಂದ ಪರಮ ಪದವೀವ ಪರಿಪೂರ್ಣ
ಪುರಂದರ ವಿಠ್ಠಲರಾಯ ಬಂದ     ॥ ೫ ॥

**ಜತೆ**

ಲೋಕ ಸಂರಕ್ಷಣ ಅಸುರರ ಸಂಹರಣ
ಲೋಕೇಶ ಪುರಂದರ ವಿಠ್ಠಲರಾಯ ಬಂದ     ॥ ೬ ॥

**For the below mentioned lyrics, please see Ref. 1 and Ref. 3.**

**ಧ್ರುವತಾಳ**     **ರಾಗ : ನಾಟ     ಧ್ರುವತಾಳ**

ವರಗಿರಿಯಿಂದ ತಿಮ್ಮಯ್ಯ ಬಂದ
ಸಿಂಹಗಿರಿಯಿಂದ ನರಸಿಂಹ ಬಂದ
ಹಸ್ತಿಗಿರಿಯಿಂದ ವರದರಾಜನು ಬಂದ
ಯದುಗಿರಿಯಿಂದ ನಾರಾಯಣ ಬಂದ
ಕಾವೇರಿಯಿಂದ ರಂಗನಾಥನು ಬಂದ
ಪುರುಷೋತ್ತಮದಿಂದ ಜಗನ್ನಾಥ ಬಂದ
ಪಾಂಡುರಂಗದಿಂದ ಎನ್ನ ಮನ್ನಿಸಿ
ಮನೆಗೆ ಪುರಂದರ ವಿಠಲರಾಯ ಬಂದ ॥ 1 ॥

**ಮಟ್ಟತಾಳ**

ಬದರಿಕಾಶ್ರಮದಿಂದ ಬಾದರಾಯಣ ಬಂದ
ಕಿಂಪುರುಷ ಖಂಡದಿಂದ ಹನುಮನೊಡೆಯ –
ರಾಮಚಂದ್ರ ಬಂದ
ಕ್ಷೀರ ವಾರಿಧಿ ವಾಸಿ
ಪುರಂದರ ವಿಠಲ ರಾಯ ಬಂದ ॥ 2 ॥

**ತ್ರಿವಿಡಿತಾಳ**

ಶ್ರೀಮದನಂತಶಯನದಿಂದ ಶ್ರೀಮದನಂತ
ಪದ್ಮನಾಭ ಬಂದ
ಶ್ರೀಮದಾಚಾರ್ಯರಿಗೊಲಿದ ಶ್ರೀಮದುಡುಪಿಯ
ಕೃಷ್ಣ ಬಂದ
ಶ್ರೀಮದ್ವಾರಣಾಸಿಯಿಂದ ಶ್ರೀಮಹಾವಿಷ್ಣುವೇ ಬಂದ
ಅಹಾ ಆಹಾ ಓ ಪುರಂದರ ವಿಠಲನೆ

ವನಗಿರಿಯಿಂದ ತಿಮ್ಮರಾಯ ಬಂದ
ಸಿಂಹಗಿರಿಯಿಂದ ನರಸಿಂಹ ಬಂದ
ಹಸ್ತಿಗಿರಿಯಿಂದ ವರದರಾಜ ಬಂದ
ಕೇತು ಗಿರಿಯಿಂದ ನಾರಾಯಣ ಬಂದ
ಕಾವೇರಿಯಿಂದ ರಂಗನಾಥ ಬಂದ
ಪುರುಷೋತ್ತಮದಿಂದ ಜಗನ್ನಾಥ ಬಂದ
ಪಾಂಡುರಂಗದಿಂದಲೆನ್ನಮನ್ನಿಸಿ ಮನೆಗೆ
ಪುರಂದರ ವಿಠಲ ತಾನೆ ಬಂದ

**ಮಟ್ಟತಾಳ**

ಬದರಿಕಾಶ್ರಮದಿಂದ ಬಾದರಾಯಣ ಬಂದ
ಕಿಂಪುರುಷ ಖಂಡದಿಂದ ಹನುಮಂತನೊಡೆಯ
ರಾಮ ರಾಯನೆ ಬಂದಾ
ಅನಂತಶಯನದಿಂದ ಅನಂತಮೂರುತಿ ಬಂದ
ಕ್ಷೀರವಾರಿಧೀಶ ಪುರಂದರ ವಿಠಲ

**ಅಟತಾಳ**

ಶ್ರೀಮದನಂತಶಯನದಿಂದ
ಶ್ರೀಮದಾಚಾರ್ಯರ
ಶ್ರೀಮುದ್ದು ಉಡುಪಿನ ಕೃಷ್ಣ ಬಂದ
ಶ್ರೀಮನೋಹರ ದ್ವಾರಾವತಿಯಲಿ

ಮನೆಗೆ ಬಂದ ॥ 3 ॥

ಶ್ರೀ ಪುರಂದರ ವಿಠಲ ಬಂದ

**ಅಟ್ಟತಾಳ**

**ಆದಿತಾಳ**

ಪ್ರಯಾಗದಿಂದ ಪ್ರಯಾಗ ಮಾಧವ ಬಂದ

ಪ್ರಯಾಗ ಮಾಧವ ಕಾಸಿಯ ಆದಿಕೇಶವ

ಕ್ಲೇಶನಾಶನ ಬಂದ

ಗಯೆಯಿಂದ ಗದಾಧರ ಬಂದ

ಗಯಾ ಗದಾಧರ ಬಂದ

ಆಯಾಸವಿಲ್ಲದೆ ಆದಿಕೇಶವ ಬಂದ

ಆ ಆ ಆ ದಾಸರ ಮನೆಗೆ

ಕೈವಲ್ಯ ಪುರಂದರ ವಿಠಲ ಮನೆಗೆ ಬಂದ ॥ 4 ॥

ಶ್ರೀ ಪುರಂದರ ವಿಠಲ ಬಂದ

**ಆದಿತಾಳ**

**ಏಕತಾಳ**

ಅತಳ ವಿತಳ ಸುತಳ ಮಹಾತಾಳ

ಅತಳ ವಿತಳದಿಂದ ಸುತಳ ಮಹಾತಳ

ತಳಾತಳ ರಸಾತಳ ಪಾತಾಳದಿಂದ

ತಳಾತಳ ರಸಾತಳ ಪಾತಾಳದಿಂದ

ಭೂಭುವಸ್ವಃ ಮಹಾಜನ ತಪಃ ಸತ್ಯಲೋಕದಿಂದ

ಭೂತಳದಿಂದ ನಭಸ್ಥಳದಿಂದ ಸುಜನ

ಪರಮ ಪದವೀವ ಪರಿಪೂರ್ಣ ಪರಬ್ರಹ್ಮ

ಮಹಾಜನ ತಪ ಸತ್ಯಲೋಕದಿಂದ

ಪುರಂದರ ವಿಠಲ ಬಂದ ॥ 5 ॥

ಪರಮ ಪದವಿಯಿಂದ ಪರಿಪೂರ್ಣ

ಬೊಮ್ಮ ಪುರಂದರ ವಿಠಲನೆ ಬಂದ

**ಝುಂಪೆತಾಳ**

ಮೇಲುಗಿರಿಯಿಂದ ಮಹಾಲಕ್ಷ್ಮೀವರನು ಬಂದ

ಆಲುಮೇಲುಮಂಗದಿಂದ ಭೂರಮಣ ಬಂದ

ಕಾಲಿಂದಿಯಿಂದ ಕಾಳಿಂಗ ಮರ್ದನ ಬಂದ

ಲೀಲಾ ವಿನೋದಿ ಪುರಂದರ ವಿಠಲ ಬಂದ ॥ 6 ॥

**ಜತೆ**

ಲೋಕ ಸಂರಕ್ಷಕ ಅಸುರ ಸಂಹಾರಕ
ಲೋಕೇಶ ಪುರಂದರ ವಿಠಲ ಬಂದ ॥ 7 ॥

**ಜತೆ**

ಅಂತಿಂತೆನ್ನದೆ ಎನ್ನಂತರಂಗದಿ
ಸಂತತ ನೆಲೆಯಾದ ಶ್ರೀ ಪುರಂದರ ವಿಠಲಾ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದೊಂದು ವಿಷ್ಣುವಿನ ಬೇರೆ ಬೇರೆ ಕ್ಷೇತ್ರ ಮತ್ತು ರೂಪಗಳ ಅನುಕ್ರಮಣಿಕೆಯಂತಿದೆ.

೧. **ವರಗಿರಿ** = ತಿರುಪತಿ
**ಸಿಂಹಗಿರಿ** = ಅಹೋಬಲ
**ಹಸ್ತಿಗಿರಿ** = ಕಂಚಿ
**ಯದುಗಿರಿ** = ಮೇಲುಕೋಟೆ
**ಕಾವೇರಿ** = ಆದಿ ರಂಗ, ಪಶ್ಚಿಮ ರಂಗ, (ಶ್ರೀರಂಗ ಪಟ್ಟಣ) ಮತ್ತು ಅಂತ್ಯ ರಂಗ (ಶ್ರೀರಂಗಮ್)
**ಪುರುಷೋತ್ತಮ** = ಪುರಿ (ಜಗನ್ನಾಥ ಪುರಿ)
**ಪಾಂಡುರಂಗ** = ಪಂಢರಪುರ

೨. **ಬದರಿಕಾಶ್ರಮ** = ಬದರೀನಾಥದಲ್ಲಿ ಇರುವ ಬದರಿ ನಾರಾಯಣ ದೇವಸ್ಥಾನ
**ಬಾದರಾಯಣ** = ವೇದವ್ಯಾಸರು
**ಕಿಂಪುರುಷ ಖಂಡ** = ಹಿಮಾಲಯದ ಉತ್ತರ ಭಾಗದಲ್ಲಿದೆ. ಇಲ್ಲಿಯೇ ಚಿರಂಜೀವಿಯಾದ ಹನುಮಂತನು ಇರುವನೆಂದು ಪುರಾಣಗಳು ಹೇಳುತ್ತವೆ.

೩. **ಅನಂತಶಯನ** = ತಿರುವನಂತಪುರದಲ್ಲಿ ಇರುವ ಅನಂತ ಪದ್ಮನಾಭ
**ಉಡುಪಿ** = ಶ್ರೀ ಕೃಷ್ಣ ದೇವಸ್ಥಾನ, ಉಡುಪಿ
**ವಾರಣಾಸಿ** = ಕಾಶಿ. ವರಣಾ ಮತ್ತು ಅಸೀ ನದಿಗಳ ಸಂಗಮದಲ್ಲಿದೆ. ಇದರ ಹತ್ತಿರ ಗಂಗಾ ನದಿಯು ಹರಿಯುತ್ತದೆ. ಕಾಶಿ ವಿಶ್ವನಾಥ ಮಂದಿರ ತುಂಬಾ ಪ್ರಸಿದ್ಧ. ಇದು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದು.

೪. **ಪ್ರಯಾಗ** = ಇದು ತ್ರಿವೇಣಿ ಸಂಗಮ. ಇಲ್ಲಿ ಗಂಗೆ-ಯಮುನೆ-ಸರಸ್ವತಿ ನದಿಗಳು ಸಂಗಮ ಹೊಂದುತ್ತವೆ. ಕಾಶಿಯ ಹತ್ತಿರವಿದೆ.
**ಗಯಾ** = ಇಲ್ಲಿರುವ ವಿಷ್ಣು ಪಾದ ಮಂದಿರವೇ ಮುಖ್ಯ ಮಂದಿರ. ಪಿತೃ ಕ್ಷೇತ್ರ. ಇದರ ಹತ್ತಿರ ಫಲ್ಗುಣಿ ನದಿ ಹರಿಯುತ್ತಿದೆ.
**ಆದಿಕೇಶವ** = ಕಾಗಿನೆಲೆ ಆದಿಕೇಶವ. ಕನಕದಾಸರ ಆರಾಧ್ಯ ದೈವ. ಇದು ಹಾವೇರಿ ಹತ್ತಿರವಿದೆ.

**೫. ಏಳು ಅಧೋಲೋಕಗಳು =** ಅತಳ, ವಿತಳ, ಸುತಳ, ಮಹಾತಳ, ತಳಾತಳ, ರಸಾತಳ, ಪಾತಾಳ

**ಇವು ಮೇಲಿನ ಲೋಕಗಳು =** ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ,
ಜನೋಲೋಕ, ತಪೋಲೋಕ, ಸತ್ಯಲೋಕ

**೬. ಮೇಲುಗಿರಿ =** ತಿರುಪತಿ

**ಆಲಮೇಲುಮಂಗಮ್ಮ =** ಪದ್ಮಾವತಿ. ತಿರುಪತಿಯ ಹತ್ತಿರದಲ್ಲಿರುವ ತಿರುಚ್ಚಾನೂರಿನಲ್ಲಿರುವ ಪದ್ಮ ಸರೋವರದ
ದಂಡೆಯ ಮೇಲೆ ಪದ್ಮಾವತಿಯ ಮಂದಿರವಿದೆ. ಪದ್ಮಾವತಿಗೆ ತಮಿಳಿನಲ್ಲಿ ಅಲಮೇಲು ಮಂಗಮ್ಮ ಎಂಬ ಹೆಸರಿದೆ.

**ಕಾಳಿಂದಿ =** ಯಮುನಾ

**ಕಾಳಿಂಗ ಮರ್ಧನ =** ಕೃಷ್ಣ

**Classification:** Suladi
**Name of Suladi:** kshEtra suLAdi / abhishravaNa suLAdi
**Ankita:** purandara vittala
**Location:** NA
**Category:** Srinivasa Stuti, Vishnu Stuti
**Sub-Category:** Vishnu, srinivasa, Krishna, Lakshmi, Narayana, vaikunta, padma, nadi, Tirupati, loka, rama, kashi, ranga, Narasimha, hanuma, badari, madhwacharya,
**Pravachana:** NA
**Explanation:** NA